ಅಸಲು ದಾವಾ ನಂಃ 46/2024
ಡಿ.ಡಬ್ಲ್ಯುಃ 4

<u>ದಿನಾಂಕಃ **25-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ವಿ. ವಕೀಲರಿಂದಃ</u>

ನಾನು ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 40 ವರ್ಷಗಳಿಂದ ಮಠದಲ್ಲಿ ಕೆಲಸ ಮಾಡುತ್ತಾ ಇರುತ್ತೇನೆ. ನನಗೆ ದಾವಾ ಸ್ವತ್ತಿನ ಬಗ್ಗೆ ಗೊತ್ತಿರುತ್ತದೆ. ದಾವಾ ಸ್ವತ್ತು ಸ.ನಂ.27 ವಿಸ್ತೀರ್ಣ 4 ಎಕ್ರೆ 38 ಗುಂಟೆ ಅಡಿಗೆಬೈಲು ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 6 ಗುಂಟೆ ಖರಾಬು ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿ ನನಗೆ ಗೊತ್ತಿರುವುದಿಲ್ಲ, ಆದರೆ ಎಲ್ಲಾ ಆಸ್ತಿ ನಮ್ಮದೇ ಇರುತ್ತದೆ. ಸ.ನಂ.27 ರ ಆರ್.ಟಿ.ಸಿ. ಯನ್ನು ನೋಡಿರುತ್ತೇನೆ. ಸದರಿ ಪಹಣಿಯಲ್ಲಿ ಸ.ನಂ.27 ರಂಭಾಪುರಿ ಪೀಠದ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿ ಶಿವಲಿಂಗಪ್ಪ ಹೆಸರಿನಲ್ಲಿ ಇರುತ್ತದೆ.

2. ವಾದಿಯರ ತಂದೆ ಮಠದ ಎಸ್ಟೇಟ್ ನಲ್ಲಿ ರೈಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಶಿವಲಿಂಗಪ್ಪ ಇವರು ಮಠದ ಕ್ವಾರ್ಟರ್ಸ್ ನಲ್ಲಿ ತಮ್ಮ ಸಂಸಾರದೊಂದಿಗೆ ವಾಸ ಇದ್ದರು. ನನಗೆ ಶಿವಲಿಂಗಪ್ಪ ಇವರಿಗೆ ಸರ್ಕಾರದಿಂದ ಜಮೀನು ಮಂಜೂರು ಆಗಿರುವ ವಿಚಾರ ಗೊತ್ತಿರುವುದಿಲ್ಲ. ತಪ್ಪೊಪ್ಪಿಗೆ ಪತ್ರವನ್ನು ಶಿವಲಿಂಗಪ್ಪ ಇವರು ತಮ್ಮ ಹೆಸರಿಗೆ ಮಾಡಿಕೊಂಡಿರುವ ಬಗ್ಗೆ ಬರೆದುಕೊಟ್ಟಿರುತ್ತಾರೆ. ಶಿವಲಿಂಗಪ್ಪ ಇವರ ಹೆಸರಿಗೆ ಆಸ್ತಿ ಮಾಡಿಕೂಂಡಿರುವ ಬಗ್ಗೆ ನಾನು ಪಹಣಿಯನ್ನು ನೋಡಿರುತ್ತೇನೆ. ನಾನು ಪಹಣಿ ನೋಡುವ ಪೂರ್ವದಲ್ಲಿ ಎಷ್ಟು ವರ್ಷ ಮೊದಲು ಮಂಜೂರು ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ, ಆದರೆ ಪಂಚಾಯಿತಿಗೆ ಕರೆದಾಗ ನನಗೆ ಗೊತ್ತಾಗಿರುತ್ತದೆ.

3. ವಾದಿಯ ತಂದೆ ಮಠದ ಹೆಸರನ್ನು ದುರ್ಬಳಿಕೆ ಮಾಡಿಸಿಕೊಂಡು ಗ್ರಾಂಟ್ ಮಾಡಿಸಿಕೊಂಡಿರುತ್ತಾರೆ ಎಂದು ನಾವಾಗಲೀ ಅಥವಾ ಮಠದವರಾಗಲೀ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿ. ಮಠದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಕಾನೂನಿನ ವ್ಯವಹಾರ ಜ್ಞಾನ ನಮಗೂ ಮತ್ತು ಮಠದವರಿಗೂ ಇರುತ್ತದೆ ಎಂದರೆ ಸರಿ. ತಪ್ಪೊಪ್ಪಿಗೆ ಪತ್ರವನ್ನು ಮಠದಲ್ಲಿ ಬರೆದುಕೊಟ್ಟಿದ್ದು ಆ ಕಾಲಕ್ಕೆ ಸ್ವಾಮೀಜಿಯವರು ಇದ್ದರು. ಸದರಿ ತಪ್ಪೊಪ್ಪಿ ಗೆ ಪತ್ರ ಬರೆದಕೊಡುವ ಕಾಲಕ್ಕೆ ಸದರಿ ದಾಖಲೆ ಶಿವಲಿಂಗಪ್ಪ ಇವರ ಬಳಿ

ಇತ್ತು. ಸದರಿ ತಪ್ಪೊಪ್ಪಿಗೆ ಬರವಣಿಗೆಯನ್ನು ಮಠದ ಕಚೇರಿಯಲ್ಲಿಯೇ ಬರೆದಿರುತ್ತಾರೆ. ಆ ದಿನ ಸ್ವಾಮೀಜಿಯವರು ಅಲ್ಲಿ ಇರಲಿಲ್ಲ.

4. ನಿಡಿ-3 ರಲ್ಲಿ ಕೊನೆಯ ಪುಟದಲ್ಲಿ ದಿನಾಂಕಃ 8.12.2020 ರಂದು ಬರೆದ ಬರವಣಿಯ ಕೊನೆಯ ಹಾಳೆ ಇರುತ್ತದೆ ಎಂದರೆ ಸರಿ. ದಿಃ 8.12.2020 ರ ನಂತರ ಮಠದ ಲೆಕ್ಕ ಪತ್ರದ ವ್ಯವಹಾರವನ್ನು ಶಿವಲಿಂಗಪ್ಪ ಎನ್ನುವವರು ನೋಡಿಕೊಳ್ಳುತ್ತಿದ್ದರು. ನಿಡಿ-3 ಲೆಕ್ಕಪತ್ರಕ್ಕೆ ಸಂಬಂಧಿಸಿದ ಪುಸ್ತಕ ಇರುತ್ತದೆ. ಪ್ರತೀ ವರ್ಷ ನಾವು ಲೆಕ್ಕ ಪುಸ್ತಕವನ್ನು ಇಟ್ಟುಕೊಳ್ಳುತ್ತೇವೆ ಎಂದರೆ ಸರಿ. ತಪ್ಪೊಪ್ಪಿ ಗೆ ಪತ್ರವು ಯಾವ ವರ್ಷದ ಲೆಕ್ಕದ ಪುಸ್ತಕದಲ್ಲಿ ಬರೆದುಕೊಟ್ಟಿತ್ತಾರೆ ಗೊತ್ತಿರುವುದಿಲ್ಲ ಆದರೆ ದಿನಾಂಕ ಗೊತ್ತಿರುತ್ತದೆ ಎಂದು ಉತ್ತರಿಸಿರುತ್ತಾರೆ. ಮಠದಲ್ಲಿ ತಪ್ಪೊಪ್ಪಿ ಗೆ ಪತ್ರ ಬರೆದುಕೊಡುವ ಕಾಲಕ್ಕೆ ಸುಮಾರು ಎಂಟು ಹತ್ತು ಜನ ಹಾಜರಿದ್ದರು. ಸದರಿ ತಪ್ಪೊಪ್ಪಿಗೆ ಪತ್ರಕ್ಕೆ ಆ ದಿನ ಸ್ವಾ ಮೀಜಿಯವರು ಸಹಿ ಮಾಡಿರುತ್ತಾರೆ. ಆ ದಿನ ಶಿವಲಿಂಗಪ್ಪ ಇವರ ಕಡೆಯಿಂದ ಆಸ್ತಿಗೆ ಸಂಬಂಧಿಸಿದ ಹಕ್ಕು ಪತ್ರವನ್ನು ಸ್ವಾ ಮೀಜಿಯವರು ಪಡೆದುಕೊಂಡಿರುತ್ತಾರೆ. ನಮ್ಮ ಮಠದಲ್ಲಿ ಶಿವಾನಂದ್ ಎನ್ನುವವರು ಕೆಲಸ ಮಾಡುತ್ತಿದ್ದು ಅವರ ಬಗ್ಗೆ ಗೊತ್ತಿರುತ್ತದೆ. ತಪ್ಪೊಪ್ಪಿ ಗೆ ಪತ್ರ ಬರೆದುಕೊಡುವ ಕಾಲಕ್ಕೆ ಶಿವಾನಂದ್ ರವರು ಇದ್ದರು. ಸದರಿಯವರು ಆ ದಾಖಲೆಗೆ ಸಹಿ ಮಾಡಿರುವುದಿಲ್ಲ. ತಪ್ಪೊಪ್ಪಿ ಗೆ ಪತ್ರವನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರ ತಂದೆಗೆ ಮಂಜೂರಾದ ಆಸ್ತಿಯನ್ನು ದಬ್ಬಾಳಿಕೆ ಮೂಲಕ ಪಡೆದುಕೊಳ್ಳಲು ಪ್ರಯತ್ನಪಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರು ಈ ದಾವೆಯಲ್ಲಿ ಏನೇನು ದಾಖಲೆಗಳನ್ನು ಹಾಕಿರುತ್ತಾರೆ ಎಂದು ನಾನು ನೋಡಿರುವುದಿಲ್ಲ.

4. ಪ್ರತಿವಾದಿ ಮಠದವರು ಏನು ತಕರಾರು ಹಾಕಿರುತ್ತಾರೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ಮಠಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ಸ್ವಾ ಮೀಜಿಯವರೇ ಕಾನೂನುಬದ್ಧವಾಗಿ ನೋಡಿಕೊಳ್ಳುತ್ತಾರೆ ಎಂದರೆ ಸರಿ. ದಾವಾ ಆಸ್ತಿ ವಾದಿಯರ ತಂದೆಗೆ ಸಂಬಂಧಿಸಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟ ಹಕ್ಕಿಗೆ ಸಂಬಂದಪಟ್ಟ ದಾಖಲೆಗಳನ್ನು ನಾನಾಗಲೀ, ಸ್ವಾಮೀಜಿಯವರಾಗಲೀ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ವಾದಿಯರ

ಮಾಲಿಕತ್ವಕ್ಕೆ ಸಂಬಂಧಪಟ್ಟ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ